**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ 18ನೇ ಅಡ್ಡ ರಸ್ತೆ, ಬೆಂಗಳೂರು-12.**

ಸಂಖ್ಯೆ:ಪಪೂಶಿಇ/ಶೈಶಾ/ಕ್ರೀಡೆ/ಹ.ಬಿ/01/2014-15 ದಿನಾಂಕ: 22-01-2015.

**ಜ್ಞಾಪನ**

**ವಿಷಯ:** 2014-15ನೇ ಸಾಲಿನ ರಾಷ್ಟ್ರ ಮಟ್ಟದ ಬಾಲಕ ಮತ್ತು ಬಾಲಕಿಯರ ಯೋಗಾ ಕ್ರೀಡಾ ಸ್ಪರ್ಧೆಗೆ ಕೋಚ್ ಹಾಗೂ ವ್ಯವಸ್ಥಾಪಕರನ್ನಾಗಿ ನಿಯೋಜಿಸುವ ಕುರಿತು..

* * * * *

2014-15ನೇ ಸಾಲಿನಲ್ಲಿ ರಾಷ್ಟ್ರಮಟ್ಟದ ಬಾಲಕ ಮತ್ತು ಬಾಲಕಿಯರ ಯೋಗಾ ಕ್ರೀಡೆಯ ಸ್ಪರ್ಧೆಯು ಮಹಾರಾಷ್ಟ್ರ ರಾಜ್ಯದ ಕೋಪರ್‌ಗಾಂವ್ ಇಲ್ಲಿ ದಿನಾಂಕ: 28-01-2015 ರಿಂದ 31-01-2015 ರವರೆಗೆ ಸ್ಪರ್ಧೆಯು ನಡೆಯಲಿದ್ದು, ರಾಷ್ಟ್ರಮಟ್ಟದ ಯೋಗಾ ಬಾಲಕ ಮತ್ತು ಬಾಲಕಿಯರ (ಅಂಡರ್-19) ಕ್ರೀಡಾ ಸ್ಪರ್ಧೆಗೆ ಕೋಚ್ ಮತ್ತು ವ್ಯವಸ್ಥಾಪಕರುಗಳಿಗೆ ಪ್ರಯಾಣ ಭತ್ಯೆ, ದಿನಭತ್ಯೆ, ಹಾಗೂ ಇತರೆ ವೆಚ್ಚಗಳಿಗೆ ತಗಲುವ ವೆಚ್ಚ ರೂ 11,194/-(ರೂ. ಹನ್ನೊಂದು ಸಾವಿರದ ಒಂದುನೂರು ತ್ತೊಂಬತ್ತುನಾಲ್ಕು-ಮಾತ್ರ)ಗಳನ್ನು ಬಿಡುಗಡೆ ಮಾಡಲಾಗಿದೆ.

ಈ ಸಂಬಂಧ ಕ್ರೀಡಾ ಸ್ಪರ್ಧೆಗಳನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಸ್ಪರ್ಧಿಸಲು ಕಳುಹಿಸಬೇಕಾಗಿರುತ್ತದೆ. ಸದರಿ ಯೋಗಾ ಕ್ರೀಡಾ ಸ್ಪರ್ಧೆಗಳ ಬಾಲಕ ಮತ್ತು ಬಾಲಕಿರಯರ ವ್ಯವಸ್ಥಾಪಕರಾಗಿ ಶ್ರೀ ಶಶಿಕುಮಾರ ಅಕ್ಕಿ, ದೈಹಿಕ ಶಿಕ್ಷಣ ಉಪನ್ಯಾಸಕರು, ಹರಬಟ್ಟ ಪದವಿ ಪೂರ್ವ ಕಾಲೇಜು, ಕುಂದಗೋಳಾ, ಧಾರವಾಡ ಜಿಲ್ಲೆ, ಬಾಲಕರ ಕೋಚ್ ಆಗಿ ಶ್ರೀ ಎನ್ ಸಿದ್ದಲಿಂಗಯ್ಯ, ದೈಹಿಕ ಶಿಕ್ಷಣ ಉಪನ್ಯಾಸಕರು, ಮುರಳಿ ಪದವಿ ಪೂರ್ವ ಕಾಲೇಜು, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೆಣ್ಣು ಮಕ್ಕಳ ತಂಡದ ಕೋಚ್ ಆಗಿ ಶ್ರೀಮತಿ ಗೀತಾ ಸಿ.ಎಸ್, ದೈಹಿಕ ಶಿಕ್ಷಣ ಉಪನ್ಯಾಸಕರು, ಚೆನ್ನಾಂಬಿಕಾ ಪದವಿ ಪೂರ್ವ ಕಾಲೇಜು, ಚನ್ನಪಟ್ಟಣ, ಇವರುಗಳನ್ನು ನಿಯೋಜಿಸಿ ಆದೇಶಿಸಿದೆ.

ಕೋಚ್ ಆಗಿ ನೇಮಿಸಲಾಗಿರುವ ದೈಹಿಕ ಶಿಕ್ಷಕರು ಹಾಗೂ ತಂಡದ ವ್ಯವಸ್ಥಾಪಕರು, ದಿನಾಂಕ: 26-01-2015 ರಂದು ಬೆಳಗ್ಗೆ 09-00 ಗಂಟೆಗೆ ಹಾಜರಿರಲು ಸೂಚಿಸಿದೆ. ಹಾಗೂ ಸ್ಪರ್ಧಿಸಲಿರುವ ಕ್ರೀಡಾಪಟುಗಳಿಗೆ ಕ್ರೀಡೆ ನಡೆಯುವ ಸ್ಥಳದಲ್ಲಿ ಮತ್ತು ಸಮಯದಲ್ಲಿ ಅವಶ್ಯಕ ಮಾರ್ಗದರ್ಶನ ಹಾಗೂ ಉತ್ತೇಜನ ಮತ್ತು ಉಸ್ತುವಾರಿಯನ್ನು ನೋಡಿಕೊಳ್ಳಲು ಸೂಚಿಸಿದೆ. ವ್ಯವಸ್ಥಾಪಕರಾಗಿ ನೇಮಿಸಲಾಗಿರುವ ಶ್ರೀ ಶಶಿಕುಮಾರ ಅಕ್ಕಿ, ದೈಹಿಕ ಉಪನ್ಯಾಸಕರು, ಮೇಲುಸ್ತುವಾರಿಯನ್ನು ಹಾಗೂ ಕ್ರೀಡೆ ನಡೆಯುವ ಸ್ಥಳದಲ್ಲಿ ಸಾಂದರ್ಭಿಕ ನಿರ್ಣಯಗಳನ್ನು ಕೈಗೊಳ್ಳತಕ್ಕದ್ದು. ವಿಷಯದ ತೀವ್ರತೆಯನ್ನು ಆಧರಿಸಿ ಸಂಪರ್ಕದಲ್ಲಿರಲು ಸೂಚಿಸಿದೆ. ಕೋಚ್ ಮತ್ತು ವ್ಯವಸ್ಥಾಪಕರುಗಳಿಗೆ ಹಾಲಿ ಬಿಡುಗಡೆ ಮಾಡಿರುವ ದಿನದಭತ್ಯೆ ಮತ್ತು ಪ್ರಯಾಣ ಭತ್ಯೆಯನ್ನು ಹಾಗೂ ಇತರೆ ವೆಚ್ಚಗಳನ್ನು ನಿಯಮಾನುಸಾರ ನಿರ್ಣಯಿಸಿರುವಂತೆ ವಿತರಿಸುವುದು ಹಾಗೂ ಖರ್ಚು ವೆಚ್ಚದ ಕುರಿತು ಈ ನಿರ್ದೇಶನಾಲಯಕ್ಕೆ ಹಿಂದಿರುಗಿದ ತಕ್ಷಣ ಲೆಕ್ಕಪತ್ರಗಳನ್ನು ವರದಿಯೊಂದಿಗೆ ಕ್ರೀಡೆಶಾಖೆಗೆ ನೀಡಲು ಸೂಚಿಸಿದೆ.

ನಿರ್ದೇಶಕರು.
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಗಳ**

1. ಧಾರವಾಡ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಧಾರವಾಡ.
2. ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
3. ರಾಮನಗರ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ರಾಮನಗರ ಜಿಲ್ಲೆ.
4. ಜಂಟಿ ನಿರ್ದೇಶಕರು(ಆಡಳಿತ),
5. ನಿರ್ದೇಶಕರ ಆಪ್ತ ಶಾಖೆಗೆ,
6. ಸಂಬಂಧಪಟ್ಟ ಸಿಬ್ಬಂದಿಗೆ,
7. ಕಛೇರಿ ಕಡತಕ್ಕೆ.